**<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್</u>**
**<u>ಎಫ್.ಡಿ.ಪಿ ನಂ.16/2017</u>**

ಸಿ.ಡಬ್ಲ್ಯೂ-1

| | |
|---|---|
| ಸಾಕ್ಷಿದಾರರ ಹೆಸರು | ಮಂಜುನಾಥ ಪಾಟೀಲ |
| ತಂದೆ ಹೆಸರು | ವೀರನಗೌಡ |
| ವಯಸ್ಸು | 48 ವರ್ಷ |
| ಉದ್ಯೋಗ | ವಕೀಲರು |
| ವಾಸ ಸ್ಥಳ | ಎಳ್ಳೂರು ಗ್ರಾಮ |

**ದಿನಾಂಕ : 13-03-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ನ್ಯಾಯಾಲಯದ ಆಯುಕ್ತರಿಂದಃ</u>**

1. ಈ ನ್ಯಾಯಾಲಯದ ಮಧ್ಯಂತರ ಅರ್ಜಿಸಂಃ 1 ರ ಮೇಲೆ ಆದ ಆದೇಶದಂತೆ ನನ್ನನ್ನು ನ್ಯಾಯಾಲಯದ ಆಯುಕ್ತರಾಗಿ ದಾವಾ ಶೆಡ್ಯೂಲ್ ಬಿ ಆಸ್ತಿಗಳಾದ ವಿಪಿಸಿ ಸಂಃ255, 280, 280/1, 188/3 ರ ಆಸ್ತಿಗಳನ್ನು ವಿಂಗಡಿಸಲು ನೇಮಕ ಮಾಡಲಾಗಿತ್ತು. ಅದರಂತೆ ನ್ಯಾಯಾಲಯದ ಆಯುಕ್ತರ ವಾರೆಂಟನ್ನು ಪಡೆದುಕೊಂಡು ದಿಃ 05-12-2019 ರಂದು ಪ್ರಕರಣದ ಅರ್ಜಿದಾರರು ಹಾಗೂ ಎದುರುಗಾರರಿಗೆ ನೋಂದಾಯಿತ ಅಂಚೆ ಮೂಲಕ ನೋಟೀಸನ್ನು ನೀಡಿ ಸದರಿ ಆಸ್ತಿಗಳನ್ನು ಅಳತೆ ಮಾಡಿ ವಿಂಗಡಿಸಲು ದಿಃ 15-12-2019 ರಂದು ಹಾಜರು ಇರಬೇಕೆಂದು ಅವರಿಗೆ ತಿಳಿಸಿರುತ್ತೇನೆ. ಅದೇ ರೀತಿ ಅರ್ಜಿದಾರರು ಮತ್ತು ಎದುರುಗಾರರ ವಕೀಲರುಗಳಿಗೂ ಸಹ ಅಳತೆ ಮತ್ತು ವಿಂಗಡಣೆಯ ಪೂರ್ವ ನೋಟೀಸನ್ನು ನೀಡಿ ಅವರ ಸಹಿಗಳನ್ನು ಪಡೆದಿರುತ್ತೇನೆ. ಸಾಕ್ಷಿಯು ತಾವು ನೀಡಿದ್ದೇನೆ ಎಂದು ಹೇಳುವ 2- ನೋಟೀಸು ಮತ್ತು 10- ನೋಂದಾಯಿತ ಅಂಚೆ ಲಕೋಟೆಗಳನ್ನು ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿ.ಸಿ-1 ರಿಂದ ನಿ.ಸಿ-12 ಎಂದು ಗುರುತಿಸಲಾಯಿತು. ಸದರಿ

ವರದಿಯೊಂದಿಗೆ 16 ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಸಿ-13 ರಿಂದ 28 ಎಂದು ಗುರುತಿಸಲಾಯಿತು. ಅರ್ಜಿದಾರರ ಪೈಕಿ ನಾನು ನೀಡಿದ್ದ ನೋಟೀಸನ್ನು 1, 2, 5 ರಿಂದ 8 ನೇ ಅರ್ಜಿದಾರರು ತೆಗೆದುಕೊಂಡಿದ್ದು, 3 ಮತ್ತು 4 ನೇ ಅರ್ಜಿದಾರರು ನೋಂದಾಯಿತ ಅಂಚೆ ನೋಟೀಸನ್ನು ತಿರಸ್ಕರಿಸಿರುತ್ತಾರೆ. ಅದೇ ರೀತಿ ನೋಂದಾಯಿತ ಅಂಚೆ ಮೂಲಕ ನೀಡಿದ ನೋಟೀಸುಗಳನ್ನು 1 ರಿಂದ 5, 7 ಹಾಗೂ 8 ನೇ ಎದುರುಗಾರರು ತಿರಸ್ಕರಿಸಿರುತ್ತಾರೆ. 6 ನೇ ಎದುರುಗಾರರಿಗೆ ನೀಡಿದ್ದ ನೋಂದಾಯಿತ ಅಂಚೆ ನೋಟೀಸು ಅವರು ವಿಳಾಸದಲ್ಲಿ ಇರುವುದರಿಂದ ಜಾರೀ ಆಗದೇ ವಾಪಾಸ್ಸು ಆಗಿರುತ್ತದೆ.

2. ಪೂರ್ವ ನಿಗದಿಯಂತೆ ದಿಃ 15-12-2019 ರಂದು ಬೆಳಗ್ಗೆ 11 ಗಂಟೆಗೆ ಸದರಿ ಆಸ್ತಿಗಳನ್ನು ಅಳತೆ ಮತ್ತು ವಿಂಗಡಿಸಲು ಹಾಜರಿದ್ದು, ಆ ಸಮಯಕ್ಕೆ ಅರ್ಜಿದಾರರುಗಳ ಪೈಕಿ 8 ನೇ ಅರ್ಜಿದಾರರು ಮಾತ್ರ ಹಾಜರಿದ್ದು ಮತ್ತು ಎದುರುಗಾರರ ಪೈಕಿ 1 ನೇ ಎದುರುಗಾರರು ಹಾಜರಿದ್ದರು. ಮೊದಲಿಗೆ ತಿಳುವಳ್ಳಿ ಗ್ರಾಮದ ಆಸ್ತಿ ಸಂಃ 255 ನ್ನು ಅಳತೆ ಮಾಡಿದ್ದು, ಅದು ಪೂ-ಪ- 38 ಅಡಿಗಳು, ಉ-ದ- 86 ಅಡಿಗಳ ವಿಸ್ತೀರ್ಣ ಇತ್ತು. ಸದರಿ ಆಸ್ತಿಯನ್ನು ಸಮನಾಗಿ ಎರಡು ಭಾಗಗಳಾಗಿ ವಿಂಗಡಿಸಿರುತ್ತೇನೆ. ನಂತರದಲ್ಲಿ ಅದೇ ಗ್ರಾಮದ ವಿಪಿಸಿ ಆಸ್ತಿ ಸಂಃ 280 ನ್ನು ಅಳತೆ ಮಾಡಿ ವಿಂಗಡಿಸಿದ್ದು, ಅದು ಪೂ-ಪ-35 ಅಡಿಗಳು, ಉ-ದ-14 ಅಡಿಗಳ ವಿಸ್ತೀರ್ಣ ಇತ್ತು. ಸದರಿ ಆಸ್ತಿಯನ್ನು ಸಹ ಸಮನಾಗಿ ಎರಡು ಹಿಸ್ಸೇಗಳಾಗಿ ವಿಂಗಡಿಸಿರುತ್ತೇನೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಚಕ್ಕುಬಂದಿಯನ್ನು ತಯಾರಿಸಿ ವರದಿ ಸಲ್ಲಿಸಿರುತ್ತೇನೆ.

3. ತಿಳುವಳ್ಳಿ ಗ್ರಾಮದ ವಿಪಿಸಿ ಆಸ್ತಿ ಸಂಃ 280/1 ರ ಆಸ್ತಿಯನ್ನು ಅಳತೆ ಮಾಡಿದಾಗ 8 ನೇ ಅರ್ಜಿದಾರನು ಸದರಿ ಆಸ್ತಿಯು ವಿಪಿಸಿ ಆಸ್ತಿ ಸಂಃ 280 ರಲ್ಲಿ ನಿಹಿತಗೊಂಡಿದೆ ಎಂದು ತಿಳಿಸಿರುತ್ತಾರೆ. ಅದೇ ಸಮಯಕ್ಕೆ 1 ನೇ ಎದುರುಗಾರನು ಆಸ್ತಿ ಸಂಃ 280 ಅಸ್ತಿತ್ವದಲ್ಲಿ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ಆಸ್ತಿ ಸಂಃ 288 ಅದರ

ಅಸ್ತಿತ್ವದ ಬಗ್ಗೆ ಅವರನ್ನು ವಿಚಾರಿಸಿದಾಗ ಅಲ್ಲಿ ಹಾಜರಿದ್ದ 8 ನೇ ಅರ್ಜಿದಾರರಾಗಲೀ ಅಥವಾ 1 ನೇ ಎದುರುಗಾರರಾಗಲೀ ಆಸ್ತಿಯನ್ನು ತೋರಿಸಿರುವುದಿಲ್ಲ ಮತ್ತು ಅವರವರ ನಡುವೆ ಜಗಳವು ಪ್ರಾರಂಭವಾಗಿರುತ್ತದೆ. ಸದರಿ 3 ಆಸ್ತಿಗಳನ್ನು ಅಳತೆ ಮಾಡಿದ ಬಗ್ಗೆ ಪ್ರತ್ಯೇಕ ವರದಿ, ಹಸ್ತನಕಾಶೆಯನ್ನು ಆಯುಕ್ತರ ವಾರೆಂಟನೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

4. ಮೊದಲ ಬಾರಿಗೆ ಆಸ್ತಿ ಸಂಃ 288 ನ್ನು ತೋರಿಸದ ಕಾರಣಕ್ಕೆ ಹಾಗೂ ಜಗಳ ಪ್ರಾರಂಭವಾಗಿದ್ದರಿಂದ ಆಯುಕ್ತರ ವಾರೆಂಟನಂತೆ ಅಳತೆ ಮತ್ತು ವಿಂಗಡಣೆ ಮಾಡದೇ ಇದ್ದ ಕಾರಣಕ್ಕೆ ನ್ಯಾಯಾಲಯದ ಆದೇಶದಂತೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಸಹಾಯ ಮತ್ತು ರಕ್ಷಣೆಯಿಂದ ಎರಡೂ ಪಕ್ಷಕಾರರಿಗೂ ಹಾಗೂ ಅವರ ವಕೀಲರಿಗೂ ಮೌಖಿಕವಾಗಿ ತಿಳಿಸಿ ದಿಃ 17-10-2021 ರಂದು ಅಳತೆ ಮತ್ತು ವಿಂಗಡಣೆಗೆ ಸ್ಥಾನಿಕ ಭೇಟಿ ನೀಡಿರುತ್ತೇನೆ. ಆಸ್ತಿ ಸಂಃ 288 ರ ಬಗ್ಗೆ ಸಂಬಂಧಪಟ್ಟ ಗ್ರಾಮಪಂಚಾಯಿತಿಯ ಪಿ.ಡಿ.ಓ ರವರನ್ನು ವಿಚಾರಿಸಿದಾಗ ಅವರು ಅದರ ಅಸ್ತಿತ್ವದ ಬಗ್ಗೆ ಜಾಗವನ್ನು ತೋರಿಸಿರುತ್ತಾರೆ. ಸದರಿ ಆಸ್ತಿ ಸಂಃ 288 ಮನೆ ಮತ್ತು ಖುಲ್ಲಾ ಜಾಗ ಒಳಗೊಂಡಿತ್ತು. ಅದರ ಪೈಕಿ ಮನೆಯನ್ನು ಅಳತೆ ಮಾಡಿದಾಗ ಅದು ಪೂ-ಪ- 20 ಅಡಿಗಳು, ಉ-ದ-50 ಅಡಿಗಳ ವಿಸ್ತೀರ್ಣ ಇತ್ತು. ಅದನ್ನು ಸಮನಾಗಿ ಎರಡು ಹಿಸ್ಸೇಗಳಾಗಿ ವಿಂಗಡಿಸಿರುತ್ತೇನೆ. ಸದರಿ ಮನೆಗೆ ಎರಡೂ ಬದಿಯೂ ಹೊಂದಿಕೊಂಡಂತೆ ತಲಾ 5 ಅಡಿಗಳ ಖುಲ್ಲಾ ಜಾಗ ಇತ್ತು ಅದನ್ನು ವರದಿಯಲ್ಲಿ ನಮೂದಿಸಿರುತ್ತೇನೆ. ಸದರಿ ಅಳತೆಯ ಸಂದರ್ಭದಲ್ಲಿ ಹಾಜರಿದ್ದ ವ್ಯಕ್ತಿಗಳ ಸಮಕ್ಷಮ ಪಂಚಾದಸ್ತನ್ನು ಬರೆದು ಅಂತಿಮವಾಗಿ ದಿಃ 04-01-2022 ರಂದು ವರದಿಯನ್ನು ನ್ಯಾಯಾಲಯಕ್ಕೆ ಆಯುಕ್ತರ ವಾರೆಂಟನೊಂದಿಗೆ ಹಿಂದಿರುಗಿಸಿರುತ್ತೇನೆ.

5. ದಿಃ 04-01-2022 ರಂದು ವರದಿಯನ್ನು ಹಾಜರುಪಡಿಸುವಾಗ ವಿಪಿಸಿ ಆಸ್ತಿ ಸಂಃ 255 ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಬೆರಳಚ್ಚು ತಪ್ಪಾಗಿದ್ದರಿಂದ ಹಾಗೂ

ವರದಿಯೊಂದಿಗೆ ಹಸ್ತನಕಾಶೆಯನ್ನು ಹಾಜರುಪಡಿಸದೇ ಇದ್ದ ಕಾರಣಕ್ಕೆ ನಂತರದಲ್ಲಿ ದಿಃ 15-10-2022 ರಂದು ಅನುಮೋದನಾ ಪತ್ರವನ್ನು ಸಲ್ಲಿಸಿ ನ್ಯಾಯಾಲಯದ ಅನುಮತಿಯನ್ನು ಪಡೆದು ಸದರಿ ತಪ್ಪನ್ನು ಸರಿಪಡಿಸಿ ಮತ್ತೊಂದು ವರದಿಯನ್ನು ಸಲ್ಲಿಸಿರುತ್ತೇನೆ. ದಿಃ 04-01-2022 ರ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಸಿ-29 ಎಂದು ಗುರುತಿಸಲಾಯಿತು. ದಿಃ 17-10-2021 ರ ಮತ್ತು ದಿಃ 15-12-2019 ರ ಎರಡು ಪಂಚಾಯ ದಸ್ತುಗಳನ್ನು ಅವುಗಳನ್ನು ಕ್ರಮವಾಗಿ ನಿ.ಸಿ-30 ಮತ್ತು 31 ಎಂದು ಗುರುತಿಸಲಾಯಿತು. ದಿಃ 15-10-2022 ರ ಕಮೀಷನರ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಸಿ-32 ಎಂದು ಗುರುತಿಸಲಾಯಿತು. ಸದರಿ ವರದಿಯೊಂದಿಗೆ 2- ಹಸ್ತ ನಕಾಶೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಸಿ-33 ಮತ್ತು 34 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ. ಎಸ್.ಎ ವಕೀಲರಿಂದಃ**

ಶ್ರೀ ಕೆ.ಜೆ.ಹೆಚ್ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 1 ರಿಂದ 4 ನೇ ಎದುರುದಾರರ ಪರ ಶ್ರೀ ಎಸ್.ಜಿ.ವಿ ವಕೀಲರಿಂದಃ**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ನ್ಯಾಯ ಮತ್ತು ಸಮ್ಮತತೆ ಆಧಾರದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ